ಕಣ್ಣು ಹೊರಳುತಿತ್ತು. ಆಗೆಲ್ಲ ಸ್ನೇಹಿತೆಯರು ಹೇಳಿದ ಮಾತು ಗುಯ್‌ಗುಡುತ್ತಿತ್ತು. ಆದರೂ ಬಿಗುಮಾನದಿಂದ ಹಾಗೆಯೇ ಬರುತ್ತಿದ್ದಳು. ಒಮ್ಮೆ ಬಿಗುಮಾನ ದೂರ ಸರಿಸಿ ಒಂದು ಜೊತೆ ಜುಮುಕಿ ಕೊಂಡು ಕಿವಿಗೆ ಹಾಕಿಕೊಂಡೇಬಿಟ್ಟಳು. ಕನ್ನಡಿಯಲ್ಲಿ ತನ್ನ ಮುಖವನ್ನು ನೋಡಿಕೊಂಡು ಪುಳಕಗೊಂಡಳು. ಅಂದಿನಿಂದ ಜುಮುಕಿಯ ನಂಟು ಹತ್ತಿತು. ಈಗ ನೂರಾರು ಜುಮುಕಿ ಕಲೆಕ್ಷನ್‌ಗಳು ಲೀನಾ ಬಳಿ ಇವೆ.

ಕಿವಿಯೋಲೆ ಮೋಹವೇ ಹಾಗೆ. 'ಬಿಟ್ಟೆನೆಂದರೂ ಬಿಡದೀ ಮಾಯೆ' ಎನ್ನುವಂತೆ ಓಲೆಯ ಮೋಹಕ್ಕೆ ಒಳಗಾಗದವರಿಲ್ಲ. ಅದರಲ್ಲೂ ಜುಮುಕಿ ಫ್ಯಾಷನ್ ಪ್ರಿಯರ ಅಚ್ಚುಮೆಚ್ಚು. ಒಡವೆಯ ಗೊಡವೆ ಬೇಡ ಎನ್ನುವವರನ್ನೂ ಜುಮುಕಿ ತನ್ನತ್ತ ಬರ ಸೆಳೆಯುತ್ತಿದೆ. ಸಾಂಪ್ರದಾಯಿಕತೆಗೂ, ದೇಸೀತನಕ್ಕೂ, ಟ್ರೆಂಡ್‌ಗೂ ಹೊಂದಿಕೊಳ್ಳುವ ಜುಮುಕಿ ಕಾಲಕಾಲಕ್ಕೆ ಅಪ್‌ಡೇಟ್ ಆಗುತ್ತ ತನ್ನ ಅಸ್ಮಿತೆಯನ್ನು ಉಳಿಸಿ ಕೊಳ್ಳುತ್ತಲೇ ಬಂದಿದೆ. ಮದುವೆ ಸಮಾರಂಭದಿಂದ ಹಿಡಿದು ದಿನನಿತ್ಯದ ಬಳಕೆಗೂ ಲಲನೆಯರ ಕಿವಿ ಅಲಂಕರಿಸುವ ಜುಮುಕಿ ಎಲ್ಲರ ಹಾಟ್ ಫೇವರೆಟ್.

ಆಧುನಿಕತೆಯಲ್ಲಿ ಹಳೆಯ ಫ್ಯಾಷನ್ ಮತ್ತೆ ಹೊಸ ರೂಪ ತಳೆಯುತ್ತದೆ ಎನ್ನುವುದಕ್ಕೆ ಜುಮುಕಿ ಅತ್ಯುತ್ತಮ ಉದಾಹರಣೆ. ಗಂಟೆಯಾಕಾರದಲ್ಲಿ ಮೈದಳೆದು, ಭಿನ್ನ ರೂಪಗಳನ್ನು ಪಡೆಯುತ್ತ ಅಂದವನ್ನು ಹೆಚ್ಚಿಸಿಕೊಳ್ಳುತ್ತಿರುವ ಜುಮುಕಿ ಒಂದು ಕಾಲಾತೀತ ಓಲೆ ಎಂದರೆ ಅತಿಶಯೋಕ್ತಿಯಲ್ಲ. ಶತಮಾನಗಳ ಇತಿಹಾಸ ಹೊಂದಿರುವ ಜುಮುಕಿಗಳು ರಾಜಮನೆತನದ ಕಾಲದಿಂದ ಪ್ರಸಿದ್ಧಿ ಪಡೆದಿವೆ. ರಾಣಿಯರ ಕಿವಿಯಲ್ಲಿ ಅದ್ದೂರಿತನದ ಜುಮುಕಿಗಳು ರಾರಾಜಿಸಿವೆ. ಐತಿಹಾಸಿಕ ಚಲನಚಿತ್ರಗಳಲ್ಲಿ ರಾಣಿಯರ ಕಿವಿಗಳನ್ನು ಜುಮುಕಿಗಳು ಅಲಂಕರಿಸಿವೆ.



ಸೀರೆ, ಲೆಹೆಂಗಾ, ಹಾಫ್ ಸೀರೆ, ಲಾಂಗ್ ಗೌನ್, ಲಾಂಗ್ ಕುರ್ತಾ, ಲಂಗ ದಾವಣಿ, ಚೂಡಿದಾರ್, ಕುರ್ತಾ ಹೀಗೆ ಎಲ್ಲ ಬಗೆಯ ಉಡುಪಿಗೂ ಜುಮುಕಿ ಆಪ್ಯಾಯಮಾನ. ಈಗೀಗ ಪ್ಯಾಂಟ್, ಶರ್ಟ್, ಸ್ಕರ್ಟ್ ತೊಟ್ಟರೂ ಪುಟ್ಟ ಜುಮುಕಿ ಕಿವಿಯನ್ನು ಅಲಂಕರಿಸಿರುತ್ತವೆ. ಅದು ಈಗ ಟ್ರೆಂಡ್.

## ಲೇಯರ್ಡ್ ಜುಮುಕಿ



ಐದಾರು ಜುಮುಕಿಗಳನ್ನು ಒಳಗೊಂಡ ಲೇಯರ್ಡ್ ಓಲೆಗಳೂ ಈಗಿನ ಟ್ರೆಂಡ್. ಮದುವೆ ಸಮಾರಂಭಗಳಿಗೆ ಈ ಜುಮುಕಿಗಳು ಕ್ಲಾಸೀ ಲುಕ್ ನೀಡುತ್ತವೆ. ಇಂತಹ ಓಲೆಗಳನ್ನು ಆಯ್ಕೆ ಮಾಡಿಕೊಳ್ಳುವಾಗ ಆದಷ್ಟು ಚಿಕ್ಕ ಜುಮುಕಿಗೆ ಆದ್ಯತೆ ನೀಡಿದರೆ ಒಳಿತು. ಏಕೆಂದರೆ ಹೆಚ್ಚು ಲೋಲಕ್ ಇರುವ ಕಾರಣ ಅತಿಯಾದ ಭಾರವೂ ಕಿವಿಗೆ ಸಹ್ಯವಾಗದಿರಬಹುದು.

ಇವುಗಳಲ್ಲದೆ ಮೇಲೆ ಚಂದ್ರಾಕೃತಿಗೆ ಜುಮುಕಿ ಜೋಡಿಸಿರುವ 'ಹೂಪ್ಸ್ ಜುಮುಕಿ', ಹವಳದ ಜುಮುಕಿಗಳು, ಕುಂದನ್ ಜುಮುಕಿ, ಮೇಲಿನ ಕಿವಿಯನ್ನೂ ಆವರಿಸುವಂತಹ ಇಯರ್ ಕಪ್ಸ್ ಜುಮುಕಿಗಳು ಈಗ ಹೆಚ್ಚು ಬಳಕೆಯಲ್ಲಿವೆ.

### ಆಯ್ಕೆಗಳು ಹಲವು; ಅಭಿರುಚಿಗೆ ತಕ್ಕಂತೆ ಇರಲಿ

ಇತಿಪ್ಪ ಜುಮುಕಿಯಲ್ಲಿ ಬಗೆ ಬಗೆ ವಿಧಗಳು. ಮುತ್ತಿನ ಓಲೆ, ಎಲೆ, ಕಡ್ಡಿ, ಗೆಜ್ಜೆ ತಳುಕು, ನೆಲ್ಲಿಕಾಯಿ, ಕುಂದನ್, ಸ್ಟೋನ್, ಟೆರ್ರಾಕೋಟ ಇತ್ಯಾದಿ. ಬ್ಲಾಕ್ ಮೆಟಲ್, ಬೆಳ್ಳಿ ಹಾಗೂ ಚಿನ್ನದ ಬಣ್ಣ ಇರುವ ಜುಮುಕಿಗಳ ವಿವಿಧ ವಿನ್ಯಾಸಗಳು ಈಗ ಟ್ರೆಂಡ್. ಮುಖಭಾವಕ್ಕೆ, ಅಭಿರುಚಿಗೆ ಹೊಂದಿಕೊಳ್ಳುವಂತಹ ಜುಮುಕಿ ಕೊಂಡರೆ ಒಳಿತು. ಕೆಲವರಿಗೆ ದೊಡ್ಡ ಜುಮುಕಿಗಳು ಸರಿ ಹೊಂದುವುದಿಲ್ಲ. ಇನ್ನು ಕೆಲವರಿಗೆ ಚಿಕ್ಕ ಜುಮುಕಿಗಳು ಮುಖದಲ್ಲಿ ಕಾಣದೇ ಇರಬಹುದು. ಹೀಗಾಗಿ ಮುಖಕ್ಕೆ ಹಾಗೂ ನೀವು ಧರಿಸುವ ಉಡುಪಿಗೆ, ಅಭಿರುಚಿಗೆ ತಕ್ಕಂತೆ ನಿಮ್ಮ ಆಯ್ಕೆ ಇರಲಿ.

ಸಾಂಪ್ರದಾಯಿಕ 'ಗೋಲ್ಡನ್ ಜುಮುಕಿ' ಚಿನ್ನದ ಲೇಪನದ ಶಂಕುವಿನ ಆಕಾರ ಹೊಂದಿರುತ್ತವೆ. ಸಾಂಪ್ರದಾಯಿಕ ಉಡುಪಿಗೆ ಇವು ಹೆಚ್ಚು ಸೂಕ್ತ. ಇದರಲ್ಲಿ ಟೆಂಪಲ್ ವಿನ್ಯಾಸದ ಜುಮುಕಿಗಳು ಟ್ರೆಂಡ್. ಮಾಣಿಕ್ಯ, ಪಚ್ಚೆ, ಹವಳ, ನೀಲಮಣಿ, ಮುತ್ತುಗಳಂತಹ ಅಮೂಲ್ಯ ವಸ್ತುಗಳನ್ನು ಬಳಸಿ ವಿನ್ಯಾಸಗೊಳಿಸುವುದರಿಂದ ಅದ್ದೂರಿತನಕ್ಕೆ ಹೆಸರಾಗಿವೆ. ಅಲ್ಲದೇ ಇವು ಆಕರ್ಷಕ ಲುಕ್ ನೀಡುತ್ತವೆ.

ಗುಜರಾತಿನ ಶೈಲಿಯ 'ಸಿಲ್ವರ್ ಆಕ್ಸೈಡ್ ಜುಮುಕಿ'ಗಳು ಈಗ ಲಲನೆಯರ ಮನಕದ್ದಿವೆ. ಸಾಂಪ್ರದಾಯಿಕ ನೋಟಕ್ಕೂ, ಟ್ರೆಂಡಿ ಲುಕ್‌ಗೂ ಇವು ಹೇಳಿ ಮಾಡಿಸಿದಂತಿವೆ. ಸ್ಟಡ್‌ಗೆ ಜುಮುಕಿ ಜತೆಯಾಗಿರುತ್ತದೆ. ಬೆಳ್ಳಿ ಬಣ್ಣದ ಇವು ಮುಖಕ್ಕೆ ಹೊಳಪು ನೀಡುತ್ತವೆ. ಗಾಗ್ರಾ– ಚೋಲಿಯೊಂದಿಗೆ ಇವು ಹೆಚ್ಚು ಹೊಂದುತ್ತವೆ.

ಸಾಂಪ್ರದಾಯಿಕ ಕಿವಿಯೋಲೆಗಳನ್ನು ಇಷ್ಟಪಡದ ಯುವತಿಯರಿಗೆ ಡೈಮಂಡ್ ಜುಮುಕಿ ಹೆಚ್ಚು ಸೂಕ್ತ. ಅದ್ದೂರಿತನವಿಲ್ಲದ ಈ ಓಲೆಯನ್ನು ಸಮಾರಂಭಗಳಿಗೂ ಬಳಸಬಹುದು. ಲೆಹೆಂಗಾ, ಲಾಂಗ್ ಕುರ್ತಾ, ಲಾಂಗ್ ಗೌನ್‌ಗಳಿಗೂ ಈ ಬಗೆಯ ಜುಮುಕಿಗಳು ಹೆಚ್ಚು ಸೂಕ್ತ.

ಮಣ್ಣಿನ ಒಡವೆಗಳು ಮಹಿಳೆಯರ ವಾರ್ಡ್‌ರೋಬ್‌ನಲ್ಲಿ ಸ್ಥಾನ ಪಡೆದು ಬಹುಕಾಲವೇ ಆಗಿದೆ. ಈಗ ಟೆರ್ರಾಕೋಟ ಜುಮುಕಿಗಳು ಹೊಕ್ಕು ಬೀಗುತ್ತಿವೆ. ಪ್ರಾಣಿ, ಸಸ್ಯ, ಎಲೆ, ಹೂವು ಹೀಗೆ ವಿವಿಧ ವಿನ್ಯಾಸದಲ್ಲಿ ಟೆರ್ರಾಕೋಟ ಜುಮುಕಿಗಳು ಮಾರುಕಟ್ಟೆಯಲ್ಲಿ ಬರಸೆಳೆಯುತ್ತಿವೆ. ಜೇಡಿಮಣ್ಣಿನಿಂದ ರಚಿಸಲಾದ ಈ ಜುಮುಕಿಗಳು ಚರ್ಮಸ್ನೇಹಿಯಾಗಿವೆ. ಹಾಗಾಗಿ ಹಲವರ ಆಯ್ಕೆಯೂ ಇದಾಗಿದೆ.

ಈಗಿನ ಇನ್ನೊಂದು ಟ್ರೆಂಡ್ 'ಕಾಶ್ಮೀರಿ ಜುಮುಕಿ'. ಎಲ್ಲ ಜನಾಂಗದವರ ಸಾಂಪ್ರದಾಯಿಕ ಉಡುಪಿಗೆ ಇದು ಹೊಂದುತ್ತದೆ. ಇತರ ಜುಮುಕಿಗಳಿಗಿಂತ ಕಾಶ್ಮೀರಿ ಜುಮುಕಿಗಳು ಈಗ ಹೆಚ್ಚಿನ ಬೇಡಿಕೆಯಲ್ಲಿವೆ. ಜುಮುಕಿಗೆ ಮುತ್ತಿನ ಸರಪಳಿಯನ್ನು ಜೋಡಿಸಿ ಆ ಸರಪಳಿಯ ತುದಿಗೆ ಚಿಕ್ಕ ಜುಮುಕಿಯನ್ನು ಜೋಡಿಸಲಾಗುತ್ತದೆ. ಮುಂಭಾಗದಲ್ಲಿ ಜುಮುಕಿ ಹಾಕಿಕೊಂಡು ಸರಪಳಿಯನ್ನು ಮೇಲಿಂದ ಕಿವಿಯ ಹಿಂಭಾಗಕ್ಕೆ ಇಳಿ ಬಿಡಲಾಗುತ್ತದೆ. ಇದು ಕಿವಿಗೆ ಜುಮುಕಿಯಿಂದ ಆಗುವ ಭಾರವನ್ನು ತಡೆಯುತ್ತದೆ.

ಓಲೆಯೇ ಇಲ್ಲದ ಜುಮುಕಿ ಈಗ ಟ್ರೆಂಡ್. ಮುತ್ತು ಅಥವಾ ಚಿನ್ನದ ಬಣ್ಣದ ಚೈನ್‌ನ ಎರಡೂ ತುದಿಯಲ್ಲಿ ಎರಡು ಜುಮುಕಿಗಳಿರುತ್ತವೆ. ಚೈನ್ ಅನ್ನು ಕಿವಿಗೆ ಮೇಲಿಂದ ನೇತು ಹಾಕಿಕೊಂಡರೆ ಜುಮುಕಿಯ ಭಾರಕ್ಕೆ ಕಿವಿ ಜೋತು ಬೀಳುವುದಿಲ್ಲ. ಮುಂಭಾಗದ ಜುಮುಕಿಯನ್ನು ಕಿವಿಯಿಂದ ಎರಡು ಇಂಚು ಕೆಳಗೂ, ಹಿಂಭಾಗದ ಜುಮುಕಿಯನ್ನು ಭುಜದವರೆಗೂ ಇಳಿಬಿಡಬಹುದು.

ಆಸೆಗೆ ಬಿದ್ದು ಚಂದವಾಗಿ ಕಾಣುವ ಎಲ್ಲ ಒಡವೆಗಳನ್ನೂ ಕೊಳ್ಳುವುದಕ್ಕಿಂತ ಅಭಿರುಚಿಗೆ ಹಾಗೂ ಉಡುಪುಗಳ ಕಲೆಕ್ಷನ್‌ಗೆ ತಕ್ಕಂತಹ ಒಡವೆಗಳಷ್ಟೇ ವಾರ್ಡ್‌ರೋಬ್ ಹೊಕ್ಕರೆ ಚೆನ್ನ. ಎಲ್ಲವನ್ನೂ ಕೊಂಡುಕೊಂಡು ಬಳಸದೆ ಮೂಲೆಗೆ ಬಿಸಾಕಿದರೆ ಜೇಬಿಗೂ ಹೊರೆ. ಮನಸಿಗೂ ಬೇಸರ. ಅವುಗಳನ್ನು ಜತನದಿಂದ ಕಾಪಿಟ್ಟುಕೊಳ್ಳುವ ಹೊರೆಯೂ ನಮ್ಮದೇ. ■